ಈ ದಿನ ದಿನಾಂಕಃ 15-02-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು **1** ನೇ ಪ್ರತಿವಾದಿ ಪರ ವಕೀಲರಿಂದಃ

ಸದರಿ ದಾವೆಯನ್ನು ಯಾಕೆ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಕ್ರಯಕ್ಕೆ ಪಡೆದ ಸರ್ವೆ ನಂ.96 ರಲ್ಲಿರುವ 2 ಎಕರೆ ಜಮೀನಿನ ಮೇಲೆ ಹಾಕಿರುತ್ತೇನೆ. ದಾವಾ ಸ್ವತ್ತನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಈರಪ್ಪ ನವರಿಗೆ ಸೇರಿದ್ದು ನಂತರ ಅವರ ಮಕ್ಕಳಿಗೆ ವರ್ಗಾವಣೆಯಾಗಿ ನಾನು ಕ್ರಯಕ್ಕೆ ಪಡೆದಿರುತ್ತೇನೆ. ದಾವಾ ಸ್ವತ್ತಿನ ಮೂಲ ದಾಖಲೆಗಳಾದ ಮ್ಯುಟೇಷನ್ , ಪಹಣಿ ಹಾಗೂ ಇ.ಸಿ .ಯನ್ನು ನೋಡಿರುತ್ತೇನೆ. ಸರ್ಕಾರದಿಂದ ಈರಪ್ಪ ನವರಿಗೆ ದಾವಾ ಸ್ವತ್ತು ಮಂಜೂರಾಗಿರುತ್ತದೆ ನಂತರ ಅವರ ಮಕ್ಕಳಿಗೆ ವರ್ಗಾವಣೆಯಾಗಿರುತ್ತದೆ. ಈರಪ್ಪ ನವರಿಗೆ ಸರ್ಕಾರದಿಂದ ಮಂಜೂರಾದ ದಾಖಲೆಯನ್ನು ನಾನು ನೋಡಿರುತ್ತೇನೆ. ಸದರಿ ದಾಖಲೆ ಸರ್ವೆ ನಂ.96 ಕ್ಕೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಕೈ ಬರಹದ ಪಹಣಿಯನ್ನು ನಾಯಾಲಯಕ್ಕೆ ಸಲ್ಲಿಸಿದ್ದು ಹಕ್ಕು ಪತ್ರವನ್ನು ಸಲ್ಲಿಸಿರುವುದಿಲ್ಲ. ನಿಡಿ.4 ರಲ್ಲಿರುವ ಸರ್ವೆ ನಂಬರ್ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರ್ವೆ ನಂಬರ್ 96 ಎಂದು ನುಡಿಯುತ್ತಾರೆ.

2. ಸರ್ವೆ ನಂಬರ್ 17 ನನಗೂ ಹಾಗು ಈರಪ್ಪನವರಿಗೆ ಸಂಬಂಧಪಡುವುದಿಲ್ಲ ಎಂದರೆ ಸರಿ. ನಿಪಿ.4 ರಲ್ಲಿ ನಮೂದಾಗಿರುವ ಸರ್ವೆ ನಂಬರ್ 17 ಎಂದರೆ ಸರಿ. 1974-75 ನೇ ಸಾಲಿನಲ್ಲಿ ದಾವಾ ಸ್ವತ್ತು ಈರಪ್ಪ ನವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ.

ಮಂಜೂರಾದ ದಾವಾ ಸ್ವತ್ತಿನ ಹಕ್ಕುಪತ್ರವನ್ನು ನಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಲಕ್ಷ್ಮೀ ಸಾಗರ ಗ್ರಾಮದಲ್ಲಿ ಸರ್ಕಾರಕ್ಕೆ ಸೇರಿದ ಸಾವಿರಾರು ಎಕರೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ ಪೋಡಾದ ನಂತರ 300 ಎಕರೆ ಇರಬಹುದು ಎಂದು ನುಡಿಯುತ್ತಾರೆ. ಲಕ್ಷ್ಮೀಸಾಗರ ಗ್ರಾಮದಲ್ಲಿ ಯಾವ ಯಾವ ಸರ್ವೇ ನಂಬರ್ ಗಳಲ್ಲಿ ಪೋಡಾಗಿರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ಯಾವಾಗ ಪೋಡಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ಸದರಿ ವಿಚಾರವಾಗಿ ಯಾವುದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಲಕ್ಷ್ಮೀ ಸಾಗರ ಗ್ರಾಮಕ್ಕೆ ಹರೋನಹಳ್ಳಿ ಗ್ರಾಮದ ಗಡಿ ಇರುತ್ತದೆ ಎಂದರೆ ಸರಿ. ಸದರಿ ಗ್ರಾಮದಲ್ಲಿಯೂ ಸಹ ಸರಕಾರಕ್ಕೆ ಸೇರಿದ ಸಾವಿರಾರು ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಲಕ್ಷ್ಮೀ ಸಾಗರ ಗ್ರಾಮದ ಸರ್ವೆ ನಂ.96 ರಲ್ಲಿ ಸರ್ಕಾರದವರು ನಡುತೋಪನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.96 ರಲ್ಲಿ ನೀಲಗಿರಿ ಪ್ಲಾಂಟೇಷನ್ ಹಾಗೂ ಪಕ್ಷಿಗಳಿಗಾಗಿ ನೇರಲೇಮರಗಳನ್ನು ಬೆಳಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ಬೇರೆ ಜಮೀನಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಮೇಲೆ ನುಡಿದ ಪ್ಲಾಂಟೇಷನ್ ಹಾಗೂ ನೇರಲೆ ಮರಗಳನ್ನು ನಾನು ಸರ್ವೆ ನಂ.96 ರಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ.

3. ಈರಪ್ಪ ನವರಿಂದ ಪಡೆದ ಜಮೀನು ಎಲ್ಲಿ ಇರುತ್ತದೆ ಎಂದು ನಾನು ಇಲ್ಲಿಯವರಗೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.96 ರಲ್ಲಿ ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನನಗೆ ಗೊತಿತಲ್ಲ ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದು ಸದರಿ ಸರ್ವೆ ನಂಬರ್ ನಲ್ಲಿ 2 ಎಕರೆ ಜಮೀನು ಇರುತ್ತದೆ ಎಂದು

ನುಡಿಯುತ್ತಾರೆ . ಸದರಿ ಜಮೀನಿನಲ್ಲಿ ನಾನು ಸ್ವಾಧೀನದ್ಲಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ಸರ್ವೆ ನಂಬರ್ 97 ರಲ್ಲಿ ಇರುವ ಲಲಿತಮ್ಮ ನವರ ಜಮೀನು , ಪಶ್ಚಿಮಕ್ಕೆ ಸರ್ವೆ ನಂಬರ್ 95 ರಲಿಸ್ಲಿರುವ ಸರ್ಫುನ್ನಿಸಾ ರವರ ಜಮೀನು , ಉತ್ತರಕ್ಕೆ ಸರ್ವೆ ನಂಬರ್ 94 ರಲ್ಲಿರುವ ನಾಗವೇಣಮ್ಮ ನವರ ಜಮೀನು ಹಾಗೂ ದಕ್ಷಿಣಕ್ಕೆ ಸರ್ವೆ ನಂಬರ್ 17 ರಲಿಸ್ಲಿರುವ ನಾಗಪ್ಪ ನವರ ಜಮೀನು. ಸದರಿ ಚಕ್ಕು ಬಂದಿಯ ಒಳಗೆ 1 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿಯ ಮುಂದುವರೆದು ಸರ್ವೆ ನಂಬರ್ 17 ರ ಮೇಲಿನ ಭಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ.

4. 1 ನೇ ಪ್ರತಿವಾದಿ ಸ್ವಾಧೀನದಲ್ಲಿ ಇರುವ ಜಮೀನಿನ ಚೆಕ್ಕು ಬಂದಿ ಪೂರ್ವಕ್ಕೆ ಯೂಸುಫ್ಸಾಬ್ ರವರ ಜಮೀನು , ಪಶ್ಚಿಮಕ್ಕೆ ಹಳ್ಳ, ಉತ್ತರಕ್ಕೆ ನಿಂಗಪ್ಪ ನವರ ಜಮೀನು , ದಕ್ಷಿಣಕ್ಕೆ 1 ನೇ ಪ್ರತಿವಾದಿಯ ತಾಯಿಯ ಹೆಸರಿಗೆ ಇರುವ ಜಮೀನು ಇರುತ್ತದೆ.

5. ದಾವಾ ಸ್ವತ್ತನ್ನು ನಾನು ಕ್ರಯಕ್ಕೆ 1919-20 ನೇ ಸಾಲಿನಲ್ಲಿ ಪಡೆದಿರುತ್ತೇನೆ. ಸಾಕ್ಷಿಯು ಮುಂದುವರೆದು 2019-20 ನೇ ಸಾಲು ಎಂದು ನುಡಿಯುತ್ತಾರೆ. ತಾರೀಖು ಹಾಗೂ ತಿಂಗಳು ನನಗೆ ನೆನಪಿರುವುದಿಲ್ಲ. ಕ್ರಯ ಪತ್ರವನ್ನು ಯಾರು ಬರೆದರು ಎಂದು ನನಗೆ ನೆನಪಿರುವುದಿಲ್ಲ. ಕ್ರಯ ಪತ್ರಕ್ಕೆ ಎಷ್ಟು ಹಣವನ್ನು ಪಾವತಿಸಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಕ್ರಯ ಪತ್ರಕ್ಕೆ ಅಜ್ಜಯ್ಯ ಹಾಗೂ ಮಲ್ಲಪ್ಪನವರು ಸಾಕ್ಷಿಧಾರರಾಗಿ ಸಹಿ ಮಾಡಿರುತ್ತಾರೆ. ಸಾಕ್ಷಿಧಾರರು ಚನ್ನಗಿರಿ ಟೌನ್ ನವರಲ್ಲ ಎಂದರೆ ಸರಿ. ಕ್ರಯ ಪತ್ರವನ್ನು ನೊಂದಣಿ ಮಾಡಿಸುವ ಕಾಲಕ್ಕೆ ಸಾಕ್ಷಿಧಾರರನ್ನು ಹಾಗೂ ಕ್ರಯಕ್ಕೆ ಕೊಟ್ಟವರನ್ನು ನೊಂದಣಿ ಕಚೇರಿಗೆ ನಾನೇ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ಕ್ರಯ ಪತ್ರಮಾಡುವ

ಪೂರ್ವದಲ್ಲಿ ಸದರಿ ಜಮೀನಿಗೆ ಸಂಬಧಪಟ್ಟ ದಾಖಲೆಗಳನ್ನು ನಾನು ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರೇ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಜಮೀನನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಯಾವುದೇ ಅಗ್ರಿಮೆಂಟ್ ನ್ನು ಮಾಡಿಕೊಂಡಿರುವುದಿಲ್ಲ. ಈ ಹಿಂದೆ ನಾನು ಲಕ್ಷ್ಮೀ ಸಾಗರ ಗ್ರಾಮದ ಸರ್ವೆ ನಂಬರ್ 17 ರಲ್ಲಿ ಸಾಗು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸರ್ವೆ ನಂಬರ್ 96 ರಲ್ಲೇ ಸಾಗು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ.

6. ಈರಪ್ಪನವರಿಗೆ ಸರ್ಕಾರದಿಂದ ಜಮೀನು ಮಂಜೂರಾದ ಕಾಲದಿಂದಲೂ ಸ್ವಾಧೀನದಲ್ಲಿ ಇರದೇ ಬೀಳು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 17 ರಲ್ಲಿ ನಾನು ಸಾಗು ಮಾಡುತ್ತಿದ್ದಾಗ ಬೀಳು ಬಿಟ್ಟ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ದಾಖಲೆಗಳನ್ನು ತಯೂರು ಮಾಡಿ ಸುಳ್ಳು ಕ್ರಯ ಪತ್ರವನ್ನು ಸೃಷ್ಟಿಮಾಡಿರತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಇರುವ ಮಾರಾಟಗಾರರು ಈರಪ್ಪನವರ ವಾರಸುದಾರರಲ್ಲ ಎಂದರೆ ಸರಿಯಲ್ಲ. ನಿಪಿ.10 ನ್ನು ನಾನು ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸರೋಜಮ್ಮ , ಸುಶೀಲಮ್ಮ ಹಾಗೂ ಗೌರಮ್ಮ ತಯಾರುಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.10 ನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ನಿಪಿ.10 ನ್ನು ಪಡೆಯಲು ಅರ್ಜಿ ಸಲ್ಲಿಸಿದವರು ಗೌರಮ್ಮ ಅಥವಾ ಸರೋಜಮ್ಮ ಇರಬಹುದು. ನಿಪಿ.11 ನ್ನು ನಾನೇ ತಯಾರುಮಾಡಿಸಿದ್ದು ಯಾವಾಗ ಎಂದು ನನಗೆ ನೆನಪಿರುವುದಿಲ್ಲ. ದಾವೆಯನ್ನು ಸಲ್ಲಿಸಲು ನಿಪಿ.12 ಮತ್ತು 13 ರಲ್ಲಿರುವ ಕಂದಾಯ ರಸೀದಿಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಕಂದಾಯ ಕಟ್ಟಿರುತ್ತೇನೆ ಹಾಗಾಗಿ ದಾಖಲೆಗಳು ನನ್ನ ಬಳಿ ಇರುತ್ತವೆ ಎಂದು ನುಡಿಯುತ್ತಾರೆ. ಕ್ರಯಕ್ಕೆ ಪಡೆದ ವರ್ಷವೇ ಕಂದಾಯವನ್ನು ಕಟ್ಟಲು ಯಾವುದೇ ಸಮಸ್ಯೆ ಇರಲಿಲ್ಲ ಎಂದರೆ

ಸರಿ.  ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿ ಅಡಿಕೆ ಸಸಿಗಳನ್ನು ನೆಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಎರಡು ಹಾಗೂ ನಾಲ್ಕು ವರುಷಗಳ ಅಡಿಕೆ ಸಸಿಗಳು ಇರುತ್ತವೆ. ಅಡಿಕೆ ಮರಗಳನ್ನು ಹೊಂದಿರುವ ಜಮೀನಿಗೆ ಕಂದಾಯದ ಶುಲ್ಕ ಬೇರೆಯೇ ಇರುತ್ತದೆ ಎಂದರೆ ನನಗೆ ಇಲಾಖೆಯವರು ಕೇಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಎಷ್ಟು ಕಂದಾಯ  ಕಟ್ಟಿರುತ್ತೇನೆ ಎಂದರೆ ಸಾಕ್ಷಿಯು ರೂ.100-150  ಕಟ್ಟಿರಬಹುದು ಎಂದು ನುಡಿಯುತ್ತಾರೆ.  ನಿಪಿ.12 ರಲ್ಲಿ ಸಲ್ಲಿಸಿರುವ ಕಂದಾಯದ ಮೊತ್ತ ನನಗೆ ಗೊತ್ತಿಲ್ಲ ಎಂದರೆ ಸರಿ. ಸರ್ಕಾರಕ್ಕೆ ರೂ.50/-ನ ಶುಲ್ಕವನ್ನು ಯಾವ ಕಾರಣಕ್ಕಾಗಿ ಸಂದಾಯ ಮಾಡಿರುತ್ತೇನ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಕಂದಾಯ ಪಾವತಿಸಲು ಮಾಡಿರಬಹುದು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

7. 2019-20 ನೇ ಸಾಲಿನಲ್ಲಿ ದಾವಾ ಸ್ವತ್ತಿನ ಜಮೀನಿನಲ್ಲಿ  ಕೊಳವೆ ಬಾವಿಯನ್ನು ಸ್ವಂತ ಖರ್ಚಿನಿಂದ ಹಾಕಿಸಿರುತ್ತೇನೆ. ಕೊಳವೆ ಬಾವಿ ಕೊರೆಸಲು ಪಾವತಿಸಿದ ಹಣಕ್ಕೆ ರಸೀದಿಗಳನ್ನು ಪಡೆದಿರುತ್ತೇನೆ ಅವು ಮನೆಯಲ್ಲಿರುತ್ತವೆ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾವುದೆ ತೊಂದರೆ ಇರುವುದಿಲ್ಲ ಎಂದರೆ ಸರಿ.   ಕೊಳವೆ ಬಾವಿಯನ್ನು ಎಷ್ಟು ಅಡಿ ಆಳಕ್ಕೆ ಕೊರೆಯಿಸಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ ಬಹುಶಃ 800 ಅಡಿ ಇರಬಹುದು ಎಂದು ನುಡಿಯುತ್ತಾರೆ. ಕೊಳವೆ ಬಾವಿಯನ್ನು ಕೊರೆಸಲು ಎಷ್ಟು ಹಣ ಖರ್ಚು ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ.  ಕೊಳವೆ ಬಾವಿ ಕೊರೆಸಲು ಎಷ್ಟು ಅಡಿ ಕೇಸಿಂಗ್ ಬಿಟ್ಟಿರುತ್ತೇವೆ ಎಂದರೆ ನನ್ನ ತಂದೆಗೆ ಗೊತ್ತು ಎಂದುನುಡಿಯುತ್ತಾರೆ.  ಕೊಳವೆ ಬಾವಿಯ ಒಳಗೆ ಯಾವ ಕಂಪನಿಯ  ಮೋಟಾರ್ ಯಂತ್ರವನ್ನು ಇರಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ ನನ್ನ ತಂದೆಗೆ ಗೊತ್ತು ಎಂದು

ನುಡಿಯುತ್ತಾರೆ. ದಾವಾ ಸ್ವತ್ತಿನ ಪಶ್ಚಿಮ ಭಾಗದಲ್ಲಿ ಇರುವ ಹಳ್ಳದ ದಿಣ್ಣೆಗೆ ಕೊಳವೆ ಬಾವಿಯನ್ನು ಕೊರೆಸಿರುತ್ತೇನೆ. ಕೊರ್ಟ ಕಮಿಷನರ್ ನ್ನು ನೇಮಕ ಮಾಡಿಸಿ ಕೊಳವೆ ಬಾವಿಯ ಉಪಸ್ಥಿತಿಯ ಬಗ್ಗೆ ಪರಿಶೀಲನೆ ಮಾಡಿಸಿ ವರದಿ ಪಡೆಯಲು ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ. ಕೊಳವೆ ಬಾವಿಯಲ್ಲಿ 1 ½ ಯಿಂದ 2 ಇಂಚಿನವರಗೆ ನೀರು ಇರುತ್ತದೆ. ಕೊಳವೆ ಬಾವಿಯನ್ನು ಕೊರೆಸಿದ ದಾವಾ ಸ್ವತ್ತು ಒಣ ಭೂಮಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಡಿಕೆಯ ಸಸಿಗಳನ್ನು ನೆಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಕೊಳೆವೆ ಬಾವಿ ಕೊರೆಸಿದ ನಂತರ ಅಡಿಕೆ ಸಸಿಗಳನ್ನು ನೆಟ್ಟಿರುತ್ತೇನೆ ಎಂದರೆ ಸರಿ. ಅಡಿಕೆ ಸಸಿಗಳನ್ನು ನೆಟ್ಟ ನಂತರ ಕೊಳವೆ ಬಾವಿಯನ್ನು ಹಾಕಿಸಿರುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ 1 ನೇ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ.** ಸರಿ ಇದೆ**.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.